# ವಿಳಂಬ ನ್ಯಾಯದಾನ

ಕೋರ್ಟ್ ವ್ಯವಹಾರಕ್ಕೆ ಸಂಬಂಧಿಸಿ ಜನಬಳಕೆಯಲ್ಲಿರುವ 'ಗೆದ್ದವನು ಸೋತ, ಸೋತವನು ಸತ್ತ' ಎಂಬ ಗಾದೆ ಈಗಲೂ ಪ್ರಸ್ತುತವಾಗಿರುವುದಕ್ಕೆ ನ್ಯಾಯದಾನ ವಿಳಂಬವಾಗಿರುವುದು ಮುಖ್ಯ ಕಾರಣ. ತಾಲೂಕು ಹಂತಗಳಲ್ಲಿ ಅಧೀನ ನ್ಯಾಯಾಲಯಗಳು ಅಸ್ತಿತ್ವಕ್ಕೆ ಬಂದಿದ್ದರೂ ಪ್ರಕರಣಗಳ ಪ್ರಮಾಣ ಹೆಚ್ಚಾಗುತ್ತಲೇ ಇದೆ. ಪ್ರಕರಣಗಳನ್ನು ಬೇಗ ಬೇಗ ಇತ್ಯರ್ಥಪಡಿಸಲು ಎಲ್ಲ ಬಗೆಯ ಪ್ರಯತ್ನಗಳು ನಡೆಯುತ್ತಿವೆ. ಲೋಕ ಅದಾಲತ್ ಎಂಬ ಜನತಾ ನ್ಯಾಯಾಲಯ ಪರಿಕಲ್ಪನೆ, ವಿಶೇಷ ಸಂದರ್ಭಗಳಿಗೆ ಅಸ್ತಿತ್ವಕ್ಕೆ ಬಂದ ತ್ವರಿತ ನ್ಯಾಯಾಲಯಗಳು, ದಾಂಪತ್ಯ ಸಂಬಂಧಿ ಪ್ರಕರಣಗಳ ಇತ್ಯರ್ಥಕ್ಕೆ ಇರುವ ಕುಟುಂಬ ನ್ಯಾಯಾಲಯಗಳು ಕಲಾಪ ನಡೆಸುತ್ತಿದ್ದರೂ ವರ್ಷಗಳಿಂದ ಇತ್ಯರ್ಥ ಕಾಣದೆ ಉಳಿದುಕೊಂಡಿರುವ ಪ್ರಕರಣಗಳ ಸಂಖ್ಯೆ ಲಕ್ಷಗಳಲ್ಲಿದೆ. ರಾಜ್ಯ ಹೈಕೋರ್ಟ್‌ಗಳಲ್ಲಿ ಮಾತ್ರವಲ್ಲದೆ ಸುಪ್ರೀಂ ಕೋರ್ಟ್‌ನಲ್ಲಿಯೂ ಹೆಚ್ಚುತ್ತಿರುವ ಖಟ್ಲೆಗಳ ಪ್ರಮಾಣ ಎಷ್ಟು ಬೃಹತ್ತಾಗಿದೆ ಎಂದರೆ ನ್ಯಾಯಾಲಯಗಳಿಗೆ ಸಂಬಂಧಿಸಿದ ಯಾವುದೇ ರಾಷ್ಟ್ರೀಯ ಸಮಾವೇಶದಲ್ಲಿಯೂ ಈ ಸಮಸ್ಯೆ ಆದ್ಯತೆಯ ಸ್ಥಾನ ಪಡೆಯುತ್ತದೆ. ಇತ್ಯರ್ಥ ಕಾಣದ ಪ್ರಕರಣಗಳನ್ನು ತ್ವರಿತವಾಗಿ ಬಗೆಹರಿಸುವ ಮಾರ್ಗೋಪಾಯಗಳತ್ತಲೇ ಚಿಂತನೆ ಹರಿಯುತ್ತದೆ.

ನ್ಯಾಯಾಲಯದ ಮೆಟ್ಟಿಲು ಹತ್ತುವ ಪ್ರಕರಣಗಳು ಬೇಗ ಇತ್ಯರ್ಥವಾಗದಿರುವುದಕ್ಕೆ ಪ್ರಕರಣಗಳ ಸ್ವರೂಪದಂತೆ ನ್ಯಾಯಾಧೀಶರು, ವಕೀಲರು, ಕಕ್ಷಿದಾರರು, ಸಾಕ್ಷಿಗಳು ಮತ್ತು ಇಲಾಖೆ ಸಿಬ್ಬಂದಿಯೂ ಕಾರಣರಾಗಿರುವುದನ್ನು ಅಲ್ಲಗಳೆಯಲಾಗದು. ಕೇಸು ಬೇಗ ಮುಗಿಯಬೇಕು ಎಂಬ ಧಾವಂತ ಕಕ್ಷಿದಾರನಿಗಿದ್ದರೆ ಸಾಲದು, ವಕೀಲರೂ ಅದರಲ್ಲಿ ಉತ್ಸುಕತೆ ತೋರಬೇಕು. ಸಾಕ್ಷಿಗಳು ಸಹಕರಿಸಬೇಕು. ಕ್ರಿಮಿನಲ್ ಪ್ರಕರಣಗಳಾದರೆ ಸರ್ಕಾರದ ಕಡೆಯಿಂದ ಹೆಚ್ಚಿನ ಒತ್ತಾಸೆ ಅವಶ್ಯಕವಿರುತ್ತದೆ. ಸಾರ್ವಜನಿಕ ವೇದಿಕೆಗಳಲ್ಲಿ ಈ ಸಂಬಂಧ ವ್ಯಕ್ತವಾಗುವ ಕಾಳಜಿ ಕಾರ್ಯರೂಪಕ್ಕೆ ಬರುವುದಿಲ್ಲ. ನ್ಯಾಯಾಲಯಗಳಲ್ಲಿ ಪ್ರಕರಣಗಳ ಸಂಖ್ಯೆ ಇಳಿಮುಖವಾಗುವುದಿಲ್ಲ. ಸರ್ಕಾರ ಪರ್ಯಾಯ ಮಾರ್ಗಗಳನ್ನೂ ಪೂರಕ ಕ್ರಮಗಳನ್ನೂ ಹುಡುಕಬೇಕಾಗುತ್ತದೆ. ಅಂಥದ್ದೊಂದು ಪ್ರಸ್ತಾಪ ರಾಜ್ಯದ ನ್ಯಾಯಾಂಗ ಇಲಾಖೆಯಲ್ಲಿ ಇದೀಗ ವ್ಯಕ್ತವಾಗಿದೆ.

ಅದರಂತೆ ಈಗಿನ ನ್ಯಾಯಾಲಯಗಳಲ್ಲಿ ಕಲಾಪಗಳ ಅವಧಿಯನ್ನು ಸಂಜೆಯೂ ವಿಸ್ತರಿಸುವ ಚಿಂತನೆ ರೂಪು ಪಡೆದಿದೆ. ಸಂಜೆ 6 ಗಂಟೆಯಿಂದ ರಾತ್ರಿ ಎಂಟರವರೆಗೆ ನಡೆಸಲು ಉದ್ದೇಶಿಸಿದ ನ್ಯಾಯಾಲಯ ಕಲಾಪಗಳಿಗೆ ಲಘು ಸ್ವರೂಪದ ಪ್ರಕರಣಗಳನ್ನಷ್ಟೆ ವರ್ಗಾಯಿಸುವುದು ಈ ಚಿಂತನೆಯ ಹಿಂದಿನ ಉದ್ದೇಶ. ಕೆಲವು ನೂರು ರೂಪಾಯಿಗಳಷ್ಟು ಜುಲ್ಮಾನೆ ವಿಧಿಸುವಂಥ ಸಣ್ಣ ಪುಟ್ಟ ಅಪರಾಧ ಸ್ವರೂಪದ ಲಘು ಪ್ರಕರಣಗಳನ್ನು ಇತ್ಯರ್ಥಪಡಿಸಲು ಹೀಗೆ ಪ್ರತ್ಯೇಕ ನ್ಯಾಯಾಲಯಗಳಿದ್ದರೆ ಅಷ್ಟರಮಟ್ಟಿಗೆ ಮೊಕದ್ದಮೆಗಳ ಭಾರ ಇಳಿಯುತ್ತದೆ. ಸಂಜೆ ವೇಳೆಗೆ ಕಲಾಪಗಳಿರುವುದರಿಂದ ಅಂಥ ಪ್ರರಣಗಳಲ್ಲಿ ಸಿಲುಕಿದ ಉದ್ಯೋಗದಲ್ಲಿರುವ ಕಕ್ಷಿದಾರರು ರಜೆಯನ್ನು ವ್ಯರ್ಥಮಾಡದೆ ಹಾಜರಾಗಬಹುದು. ವಕೀಲರಿಗೂ ಹೆಚ್ಚಿನ ಅವಧಿಯ ವೃತ್ತಿಗೆ ಅವಕಾಶ. ಪ್ರಕಟವಾದ ಪ್ರಸ್ತಾವನೆಯಂತೆ ಸಂಜೆಯ ವೇಳೆ ಕಲಾಪ ನಡೆಸುವ ನ್ಯಾಯಾಧೀಶರಿಗೂ ಹೆಚ್ಚಿನ ಗೌರವಧನದ ಪ್ರಯೋಜನಗಳಿವೆ. ಇದೇ ಬಗೆಯಲ್ಲಿ ರಜೆಯ ದಿನಗಳಲ್ಲಿ ಕುಟುಂಬ ನ್ಯಾಯಾಲಯ ಕಲಾಪ ನಡೆಸುವ ಪ್ರಸ್ತಾಪವೂ ಚಿಂತನೆಯ ಹಂತದಲ್ಲಿದೆ. ಇದು ಅನುಷ್ಠಾನಕ್ಕೆ ಬಂದರೆ ದಾಂಪತ್ಯ ಸಮಸ್ಯೆಯನ್ನು ಬಿಡಿಸಿಕೊಳ್ಳಲು ಕೋರ್ಟ್ ಮೊರೆ ಹೊಕ್ಕ ಉದ್ಯೋಗಸ್ಥ ಮಹಿಳೆಯರು, ಉದ್ಯೋಗಸ್ಥ ಪುರುಷರು ತಮ್ಮತಮ್ಮ ಕಚೇರಿಗಳಲ್ಲಿ ರಜೆಗಳನ್ನು ವ್ಯರ್ಥಗೊಳಿಸದೆ ಪ್ರಕರಣಗಳನ್ನು ಬೇಗ ಬಗೆಹರಿಸಿಕೊಳ್ಳಲು ಸಾಧ್ಯವಾಗಲಿದೆ.

ನ್ಯಾಯಾಲಯಗಳ ಕಲಾಪಗಳನ್ನು ಸಂಜೆ ನಡೆಸುವ ಪ್ರಯೋಗ ತಮಿಳುನಾಡಿನಲ್ಲಿ ಯಶಸ್ವಿಯಾಗಿರುವ ವರದಿಗಳಿವೆ. ಅಲ್ಲಿ ಫಲಪ್ರದವಾದ ಕ್ರಮವೊಂದು ಕರ್ನಾಟಕದಲ್ಲಿ ವಿಫಲವಾಗಲು ಕಾರಣಗಳಿಲ್ಲ. ಮನಸ್ಸು ಮಾಡಿದರೆ ಸಂಜೆ ನ್ಯಾಯಾಲಯಗಳು, ರಜಾ ದಿನದ ಕಲಾಪಗಳು ಪ್ರಕರಣಗಳನ್ನು ಬೇಗ ಬೇಗ ಇತ್ಯರ್ಥಪಡಿಸಿ ನ್ಯಾಯಾಲಯಗಳ ಮೊರೆ ಹೋದವರಿಗೆ ನ್ಯಾಯವನ್ನು ಒದಗಿಸಿಕೊಡಬಹುದು. ಹೊಸದಾಗಿ ಸಂಜೆ ಕೋರ್ಟ್ ಆರಂಭಿಸುವ ಪ್ರಕಟಣೆ ಹೊರಡಿಸುವಾಗ ತೋರುವ ಉತ್ಸಾಹವನ್ನು ಪೂರಕ ಸೌಲಭ್ಯಗಳನ್ನು ಒದಗಿಸುವುದರಲ್ಲಿಯೂ ಸರ್ಕಾರ ತೋರಬೇಕು. ಇದಕ್ಕಾಗಿ ಕಟ್ಟಡಗಳು ಬೇಕಿಲ್ಲವಾದರೂ ಅಗತ್ಯ ಸಿಬ್ಬಂದಿಯನ್ನು ಒದಗಿಸುವುದರಲ್ಲಿ ನೆಪಗಳನ್ನು ಹುಡುಕಬಾರದು. ಪ್ರಕರಣಗಳನ್ನು ದಾಖಲಿಸಿಕೊಳ್ಳುವಾಗಲೇ ಅವುಗಳ ವಿಂಗಡಣೆಯಾದರೆ ವಿಚಾರಣೆಯೂ ತ್ವರಿತವಾಗುತ್ತದೆ. ಖಾಸಗಿ ವಲಯದಲ್ಲಿ ಹಗಲು ರಾತ್ರಿಯ ಪರಿವೆ ಇಲ್ಲದೆ ಕೆಲಸ ನಡೆಯುತ್ತಿರುವಾಗ ಅದು ಸಾರ್ವಜನಿಕ ವಲಯದಲ್ಲಿ ಯಶಸ್ವಿಯಾಗದಿರಲು ಕಾರಣವಿಲ್ಲ.

■ ಲಕ್ಷ್ಮಣ ಕೊಡಸೆ

ನ್ಯಾಯಾಲಯದ ಮೆಟ್ಟಿಲು ಹತ್ತುವ ಪ್ರಕರಣಗಳು ಬೇಗ ಇತ್ಯರ್ಥವಾಗದಿರುವುದಕ್ಕೆ ಪ್ರಕರಣಗಳ ಸ್ವರೂಪದಂತೆ ನ್ಯಾಯಾಧೀಶರು, ವಕೀಲರು, ಕಕ್ಷಿದಾರರು, ಸಾಕ್ಷಿಗಳು ಮತ್ತು ಇಲಾಖೆ ಸಿಬ್ಬಂದಿಯೂ ಕಾರಣರಾಗಿರುವುದನ್ನು ಅಲ್ಲಗಳೆಯಲಾಗದು. ಕೇಸು ಬೇಗ ಮುಗಿಯಬೇಕು ಎಂಬ ಧಾವಂತ ಕಕ್ಷಿದಾರನಿಗಿದ್ದರೆ ಸಾಲದು, ವಕೀಲರೂ ಅದರಲ್ಲಿ ಉತ್ಸುಕತೆ ತೋರಬೇಕು. ಸಾಕ್ಷಿಗಳು ಸಹಕರಿಸಬೇಕು. ಕ್ರಿಮಿನಲ್ ಪ್ರಕರಣಗಳಾದರೆ ಸರ್ಕಾರದ ಕಡೆಯಿಂದ ಹೆಚ್ಚಿನ ಒತ್ತಾಸೆ ಅವಶ್ಯಕವಿರುತ್ತದೆ.

